# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಡಾ|| ತಳವಾರ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 176 |
| ಉತ್ತರಿಸಬೇಕಾದ ದಿನಾಂಕ | 05.07.2023 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು) |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆ ಚಿತ್ತಾಪುರ ಪಟ್ಟಣದ ನಾಗಾವಿ ಪ್ರದೇಶದಲ್ಲಿ ರೂ. 58 ಕೋಟಿಯಲ್ಲಿ ಒಂದು ಸಾವಿರ ಮನೆಗಳನ್ನು (ಜಿ+2) ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಾದ ಡಾ|| ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಮನ್ವಯಗೊಳಿಸಿ ಕಲಬುರುಗಿ ಜಿಲ್ಲೆ ಚಿತ್ತಾಪುರ ಪಟ್ಟಣದ ಸರ್ವೆ ನಂ. 345/1/2 - 680 ಮನೆಗಳು ಮತ್ತು 302/2/5 ಗಳಲ್ಲಿ-320 ಮನೆಗಳು ಒಟ್ಟು 1000 (ಜಿ+1) ಮಾದರಿ ಮನೆಗಳನ್ನು ರೂ.58.00 ಕೋಟಿಗಳ ಯೋಜನಾ ವೆಚ್ಚದಲ್ಲಿ ನಿರ್ಮಿಸಲಾಗಿದೆ. |
| ಆ) | ಈ ಮನೆಗಳಿಗೆ ಮೂಲ ಸೌಲಭ್ಯ ಒದಗಿಸದೆ ತರಾತುರಿಯಲ್ಲಿ ಹಕ್ಕುಪತ್ರಗಳನ್ನು ನೀಡಿರುವುದು ಸರಿಯೇ; | ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಮಾರ್ಗಸೂಚಿಯಂತೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಹೊರತುಪಡಿಸಿ, ಉಳಿದ ಫಲಾನುಭವಿಗಳ ವಂತಿಕೆ ಪಡೆಯಲು ಬ್ಯಾಂಕ್ ಸಾಲ ಸೌಲಭ್ಯಕ್ಕಾಗಿ ಮಾತ್ರ ತಾತ್ಕಾಲಿಕವಾಗಿ ಹಂಚಿಕೆ ಪತ್ರಗಳನ್ನು (Provisional Certificate) ಮಾತ್ರ ವಿತರಿಸಲಾಗಿರುತ್ತದೆ. ಯಾವುದೇ ಹಕ್ಕುಪತ್ರಗಳನ್ನು ವಿತರಿಸಿರುವುದಿಲ್ಲ. |
| ಇ) | ಈ ಮನೆಗಳಿಗೆ ಮೂಲ ಸೌಲಭ್ಯಗಳನ್ನು ಯಾವಾಗ ಒದಗಿಸಲಾಗುವುದು; | ಮೇಲ್ಕಂಡ ಯೋಜನೆಗೆ ಮೂಲಭೂತ ಸೌಲಭ್ಯ ಕಾಮಗಾರಿಗಳಿಗೆ ಮಂಡಳಿ / ಸ್ಥಳೀಯ ಸಂಸ್ಥೆಗಳಿಂದ ಅನುದಾನ ಭರಿಸಬೇಕಾಗಿರುತ್ತದೆ.<br><br>ಪ್ರಸ್ತುತ ರಾಜ್ಯ ಸರ್ಕಾರದಿಂದ ಮಂಡಳಿಗೆ ಗುಂಪು ಮನೆಗಳು / ವರ್ಟಿಕಲ್ ಮನೆಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಬಿಡುಗಡೆ ಮಾಡಿರುವ ಮೊತ್ತದಡಿ ರೂ.3.00 ಕೋಟಿಗಳ ವೆಚ್ಚದಲ್ಲಿ ಕಲಬುರುಗಿ ಜಿಲ್ಲೆ ಚಿತ್ತಾಪುರ ಪಟ್ಟಣದ ಸರ್ವೆ ನಂ. 345/1/2 ಮತ್ತು 302/2/5 ಗಳಲ್ಲಿ 1000 (ಜಿ+1) ಮಾದರಿ ಮನೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳಾದ ನೀರಿನ ಸಂಪರ್ಕ, ಒಳಚರಂಡಿ, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. |
| ಈ) | ಸರ್ಕಾರ ಬಡವರಿಗಾಗಿ ಮಾಡಿದ ಹಣದ ವೆಚ್ಚ ಸ್ಥಳಕೆಯಾಗಲು ಮತ್ತು ಬಡವರು ಈ ಮನೆಗಳಲ್ಲಿ ನೆಮ್ಮದಿಯಿಂದ ಬದಕುಲು ಅವಕಾಶ ಮಾಡಿ ಕೊಡಲಾಗುವುದೇ? | ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಾದ ಡಾ|| ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಮನ್ವಯಗೊಳಿಸಿ ಕಲಬುರುಗಿ ಜಿಲ್ಲೆ ಚಿತ್ತಾಪುರ ಪಟ್ಟಣದ ಸರ್ವೆ ನಂ. 345/1/2 -680 ಮನೆಗಳು ಮತ್ತು 302/2/5 ಗಳಲ್ಲಿ-320 ಮನೆಗಳು ಒಟ್ಟು 1000 (ಜಿ+1) ಮಾದರಿ ಮನೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಮೂಲಭೂತ ಸೌಲಭ್ಯ |

| | | |
|---|---|---|
| | | ಕಾಮಗಾರಿಗಳನ್ನು ಕೊಳಗೇರಿ ಸುಧಾರಣೆ ಯೋಜನೆಯಡಿ ರಾಜ್ಯ ಸರ್ಕಾರದ ಆಯವ್ಯಯ / ಇತರೆ ಹೆಚ್ಚುವರಿ ಅನುದಾನದಡಿ ಅನುದಾನ ನಿಗಧಿಪಡಿಸಿ ಕೊಂಡು ಹಂತ ಹಂತವಾಗಿ ಮೂಲಭೂತ ಸೌಕರ್ಯ ಒದಗಿಸಿ, ಅರ್ಹ ಫಲಾನುಭವಿಗಳಿಗೆ ವಾಸಕ್ಕೆ ನೀಡಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ವಇ 81 ಹೆಚ್‌ಎಫ್‌ಎ 2023

(ಬಿ.ಝಡ್ ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್,ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು



Generated from eOffice by Zameer Ahmad Khan, DOH-MinisterHou(ZAK), MINISTER, Housing SECRETARIAT on 03/07/2023 03:26 PM